## ದಿನಾಂಕಃ10.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಂದುವರಿದ ಮುಖ್ಯ ವಿಚಾರಣೆ ವಾದಿಗಳ ಪರ ವಕೀಲರಾದ ಶ್ರೀ.ಕೆ.ಜಿ.ಎನ್.ರವರಿಂದ

| | |
|---|---|
| ಸಾಕ್ಷಿದಾರರ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಜಗದೀಶ್ ಬಿನ್ ಗಂಗರುದ್ರಯ್ಯ<br>38 ವರ್ಷ<br>ವ್ಯವಸಾಯ<br>ಗದ್ದೇಹಳ್ಳಿ |
| | ಸತ್ಯ ಪ್ರತಿಜ್ಞೆಯ **ಮೇರೆಗೆ** |

ದಿಃ07-12-2019 ರಂದು ಮಾವಿನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಕೆಗಳ ದೃಢೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿ.ಪಿ.14 ಎಂದು ಗುರುತಿಸಲಾಯಿತು.

**ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ** .

**ಪ್ರತಿವಾದಿ ಪರವಕೀಲರಾದ ಶ್ರೀ. ಎಸ್.ಎಲ್.ಆರ್.ರವರಿಂದ ಃ**

ನಾನು ಗದ್ದೇಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನಾನು ಹುಟ್ಟಿದಾಗಿನಿಂದಲೂ ಅದೇ ಗ್ರಾಮದಲ್ಲಿ ವಾಸವಾಗಿದ್ದೇನೆ. ವಾದಪತ್ರವನ್ನು ಬರೆಸಲು ನಾನು ವಾದಿ 2, 3 ,5 , ನನ್ನ ತಾಯಿ ಅಮ್ಮಾಯಮ್ಮ, ನರಸಿಂಹಯ್ಯ ಎಲ್ಲರೂ ಸೇರಿ ನನ್ನ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇವೆ. ದಾವಾಸ್ವತ್ತು ನಮ್ಮ ಕುಟುಂಬಕ್ಕೆ ಸೇರಿದ್ದಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ದಾವಾಸ್ವತ್ತು ಶನಿದೇವರ ದೇವಸ್ಥಾನದ ಸ್ವತ್ತಾಗಿರುತ್ತದೆ ಎನ್ನುತ್ತಾರೆ. ದಾವಾಸ್ವತ್ತು ಶನಿದೇವರ ದೇವಸ್ಥಾನಕ್ಕೆ ಸಂಬಂಧಿಸಿದ್ದು ಎಂದು ಹೇಳಲು ಪಂಚಾಯಿತಿಯವರು ಕೊಟ್ಟಿರುವ ದಾಖಲೆಗಳನ್ನು ನಾನು ಈಗಾಗಲೇ ಹಾಜರುಪಡಿಸಿದ್ದೇನೆ.

2. ಗದ್ದೇಹಳ್ಳಿ ಗ್ರಾಮದ ಸ.ನಂ:135 ರ ಬಾಬ್ತು ಪಹಣಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿಲ್ಲ ಎನ್ನುತ್ತಾರೆ. ಶನಿದೇವರ ದೇವಸ್ಥಾನವು ಉಂಗ್ರ ಗ್ರಾಮದ ಸ.ನಂ: 135 ರಲ್ಲಿ ಇರುತ್ತದೆ ಉಂಗ್ರ ಗ್ರಾಮದ ಸ..ನಂ: 135 ಗೋಮಾಳ ಆಗಿರುತ್ತದೆ ಎಂದರೆ ಸರಿ . ಸಾಕ್ಷಿಯು ಸದರಿ ಜಮೀನಿನ ಆರ್.ಟಿ.ಸಿ.ಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಗದ್ದೇಹಳ್ಳಿ ಗ್ರಾಮದಲ್ಲಿ ಸ.ನಂ:135 ಜಮೀನು ಇಲ್ಲ ಎಂದರೆ ಸಾಕ್ಷಿಯು ಸದರಿ ಸ.ನಂ: ಜಮೀನು ಉಂಗ್ರ ಗ್ರಾಮದಲ್ಲಿದೆ ಆದರೆ ಅದನ್ನು ಗದ್ದೇಹಳ್ಳಿ ಗ್ರಾಮದ್ದು ಎಂದು ಕರೆಯುತ್ತಾರೆ ಎನ್ನುತ್ತಾರೆ.

3. 3 ನೇ ಪ್ರತಿವಾದಿ ನಮ್ಮ ಗ್ರಾಮಸ್ಥರು. 3 ನೇ ಪ್ರತಿವಾದಿಯ ಹೆಂಡತಿ ಲಕ್ಷ್ಮೀದೇವಿ ಮಾವಿನಹಳ್ಳಿಯ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿದ್ದರು ಎಂದರೆ ಸರಿ. 3 ನೇ ಪ್ರತಿವಾದಿ ತನ್ನ ಹೆಂಡತಿಯ ಸ್ಥಾನವನ್ನು ಬಳಸಿಕೊಂಡು ಅವರೇ ಅಕ್ರಮವಾಗಿ ಆಡಳಿತ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.3 ನಡಾವಳಿಗಳು ನಡೆಯುವಾಗ ಯಾವ್ಯಾವ ಅಧಿಕಾರಿಗಳು ಇದ್ದರು ಎಂದು ನನಗೆ ನೆನಪಿಲ್ಲ. ನಿ.ಪಿ.3 ಕ್ಕೆ ಕೇವಲ ಗ್ರಾಮಪಂಚಾಯಿತಿ ಅಧ್ಯಕ್ಷರು ಮಾತ್ರ ಸಹಿ ಮಾಡಿದ್ದು ಉಳಿದ ಸದಸ್ಯರಾಗಲೀ , ಅಧಿಕಾರಿಗಳಾಗಲೀ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರಿಗೆ ತೊಂದರೆ ಮಾಡುವ ಉದ್ದೇಶದಿಂದ ಹಾಗೂ ಅವರ ಮೇಲಿರುವ ದ್ವೇಷದಿಂದ ನಾನು ಅವರ ವಿರುದ್ಧ ಈ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಹೆಂಡತಿ ಲಕ್ಷ್ಮೀದೇವಮ್ಮಳಿಗೆ ಚುನಾವಣೆ ಸಮಯದಲ್ಲಿ ಪ್ರತಿವಾದಿ 1 ಮತ್ತು 2 ರವರು ಬೆಂಬಲ ಕೊಡಲಿಲ್ಲ ಎಂದು ಹೇಳಿ ನಾನು ಅವರ ವಿರುದ್ಧ ಈ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ರಿಂದ ನಿ.ಪಿ.8 ದಾಖಲೆಗಳು 3 ನೇ ಪ್ರತಿವಾದಿಯಹೆಂಡತಿ ಪಂಚಾಯಿತಿ ಅಧ್ಯಕ್ಷರಾಗಿದ್ದಾಗ ಅವರಿಂದ ಸೃಷ್ಟಿಸಿದ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ.

4. ನಿ.ಪಿ.1 ರಿಂದ 8 ರಲ್ಲಿ ಗದ್ದೇಹಳ್ಳಿ ಗ್ರಾಮದ ಸ.ನಂಃ135 ರ ಬಗ್ಗೆ ನಮೂದಾಗಿಲ್ಲ ಎಂದರೆ ಸರಿಯಲ್ಲ. ಗ್ರಾಮಪಂಚಾಯಿತಿಯವರಿಗೆ ದಾವಾಸ್ವತ್ತನ್ನು ದೇವಸ್ಥಾನಕ್ಕೆಂದು ಮಂಜೂರು ಮಾಡಲು ಅಧಿಕಾರ ಇಲ್ಲಎಂದರೆ ಸರಿಯಲ್ಲ. ನಿ.ಪಿ.3 ರಲ್ಲಿ ಮುಂದಿನ ಆದೇಶಕ್ಕೆ ತಹಶೀಲ್ದಾರ್ , ಗುಬ್ಬಿ ರವರಿಗೆ ಪತ್ರ ರವಾನಿಸಲಾಗಿದೆ ಎಂದು ನಮೂದಿಸಲಾಗಿದೆ ,ಈ ಬಾಬ್ತು ತಹಶೀಲ್ದಾರ್ ರವರಿಂದ ಏನಾದರೂ ಮಂಜೂರಾತಿ ಆದೇಶ ಬಂದಿದೆಯಾ ಎಂದರೆ ಸಾಕ್ಷಿಯು ಇಲ್ಲಾ ಇಲ್ಲಿಯವರೆಗೂ ಬಂದಿಲ್ಲ ಎನ್ನುತ್ತಾರೆ.

**(ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

ಪ್ರ. ದ. ನ್ಯಾ ದಂ. **ಗುಬ್ಬಿ**

Both counsels present.
Plaintiff present. She is examined in chief as P.W.1, she filed affidavit in lieu of her examination chief and prays time for further chief.
For further chief of Pw1.
Call on. 25.11.2024.

Prl.Civil Judge and JMFC,Gubbi.